International Journal of Kannada Research 2024; 10(1): 179-182




International Journal of Kannada Research
www.kannadajournal.com

**ISSN: 2454–5813**
IJKR 2024; 10(1): 179-182
© 2024 IJKR
www.kannadajournal.com
Received: 22-11-2023
Accepted: 26-12-2023

**ಡಾ.ಬಿ.ಕೆ.ಮಂಜುಳ**
ಕನ್ನಡ ಪ್ರಾಧ್ಯಾಪಕರು, ಶ್ರೀಭಗವಾನ್ ಮಹಾವೀರ್ ಜೈನ್ ಪ್ರಥಮ ದರ್ಜೆ ಕಾಲೇಜು, ಕೆ.ಜಿ.ಎಫ್, ರಾಬರ್ಟ್‌ಸನ್‌ಪೇಟೆ, ಗೀತಾ ರಸ್ತೆ, ಕೆ.ಜಿ.ಎಫ್, ಕರ್ನಾಟಕ, ಭಾರತ

**Corresponding Author:**
**ಡಾ.ಬಿ.ಕೆ.ಮಂಜುಳ**
ಕನ್ನಡ ಪ್ರಾಧ್ಯಾಪಕರು, ಶ್ರೀಭಗವಾನ್ ಮಹಾವೀರ್ ಜೈನ್ ಪ್ರಥಮ ದರ್ಜೆ ಕಾಲೇಜು, ಕೆ.ಜಿ.ಎಫ್, ರಾಬರ್ಟ್‌ಸನ್‌ಪೇಟೆ, ಗೀತಾ ರಸ್ತೆ, ಕೆ.ಜಿ.ಎಫ್, ಕರ್ನಾಟಕ, ಭಾರತ

# ನೇಮಿಚಂದ್ರರ ಕಥೆಗಳ ಆಧುನಿಕತೆಯ ಸ್ತ್ರೀಸಂವೇದನೆ

**ಡಾ.ಬಿ.ಕೆ.ಮಂಜುಳ**

**ಪೀಠಿಕೆ**

ನೇಮಿಚಂದ್ರ ಅವರು ಮೂಲತಃ ಚಿತ್ರದುರ್ಗ ಜಿಲ್ಲೆಯವರು. ತುಮಕೂರು, ಬೆಂಗಳೂರು, ಮೈಸೂರುಗಳಲ್ಲಿ ವಿದ್ಯಾಭ್ಯಾಸ ಮಾಡಿ ಬಿ.ಇ. ಪದವಿಯನ್ನು ಪಡೆದರು. ಎಚ್.ಎ.ಎಲ್‌ನ 'ಹೆಲಿಕಾಪ್ಟರ್ ಡಿಸೈನ್ ಬ್ಯೂರೋ'ದಲ್ಲಿ ಮುಖ್ಯ ವ್ಯವಸ್ಥಾಪಕಿಯಾಗಿ ಕೆಲಸ ನಿರ್ವಹಿಸಿ ನಿವೃತ್ತರಾಗಿದ್ದಾರೆ. ಇವರ 'ನಮ್ಮ ಕನಸುಗಳಲ್ಲಿ ನೀವಿದ್ದೀರಿ' ಕಥಾಸಂಕಲನದ ಕಥೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಪಿತೃಪ್ರಧಾನ ಸಮಾಜದಲ್ಲಿ ಸ್ತ್ರೀಯರು ಪುರುಷರಿಗಿಂತ ಹೆಚ್ಚು ಕನಸು ಕಾಣುತ್ತಾರೆನಿಸುತ್ತದೆ. ಏಕೆಂದರೆ ಹೆಣ್ಣಿಗೆ ಕಟ್ಟುಪಾಡುಗಳು, ನಿರ್ಬಂಧಗಳು, ಕರ್ಮ, ಕ್ರಿಯೆ ಮತ್ತು ಕೃತಿಯಲ್ಲಿ ತಮ್ಮನ್ನು ನೇರವಾಗಿ ತೊಡಗಿಸಿಕೊಳ್ಳುವಲ್ಲಿ ಇರುವ ಅಡ್ಡಿ ಅಡಚಣೆಗಳು ಸಮಾಜದಿಂದ ಎದುರಾಗುವುದರಿಂದ ಕಲ್ಪನೆ, ಕನಸುಗಾರಿಕೆಗಳು ಹೆಚ್ಚೆನಿಸುತ್ತದೆ. ಈ ಅಧೀನತೆ ಮತ್ತು ನಿರ್ಬಂಧಗಳು ಕಲ್ಪನೆ, ಭಾವನೆಗಳಿಗೆ ರೆಕ್ಕೆ–ಪುಕ್ಕ ಕೊಟ್ಟು ಕನಸಿನ ಬದುಕನ್ನು ಸವಿಯುವುದರಲ್ಲಿ ನೆಮ್ಮದಿಯನ್ನು ಪಡೆಯುವಂತಾಗುತ್ತದೆ. ನೇಮಿಚಂದ್ರರ ಕಥೆಗಳಲ್ಲಿ ಪ್ರವಾಸದ ಸವಿಯನ್ನು ಆಸ್ವಾದಿಸುವ ಗುಣವು ಸಹ ಚೈತೋಹಾರಿಯಾಗಿದೆ. ಇದಕ್ಕೆ ಅವರ ಮನಸ್ಸಿನ ಗುಣವೇ ಕಾರಣ. ಆರೋಗ್ಯಕರವಾದ ಹಾಗೂ ಪೂರ್ವಗ್ರಹಗಳಿಲ್ಲದ ಸಂದರ್ಭಕ್ಕೆ ಒಗ್ಗಿಕೊಂಡು ಅಲ್ಲಿನ ಅನುಭವಗಳಿಗೆ ಮುಕ್ತವಾಗಿ ಮನಸು ತೆರೆದುಕೊಳ್ಳುತ್ತದೆ.

ಪ್ರಮುಖ ಕಥೆಗಾರರಾದ ನೇಮಿಚಂದ್ರರ ಕಥೆಗಳು ಆಧುನಿಕ ಮಹಿಳಾಸಂವೇದನೆಯ ಕಥಾ ಸ್ಪಂದನೆಯಲ್ಲಿ ವಿಶಿಷ್ಟ ಅಭಿವ್ಯಕ್ತಿಗಳಾಗಿವೆ. ಆಧುನಿಕತೆ ಬೀರಿರುವ ಪರಿಣಾಮಗಳನ್ನು ಇಲ್ಲಿ ಪ್ರಮುಖವಾಗಿ ಗುರುತಿಸಬಹುದು. ಇದು ಹಳೆಯದನ್ನು ಕಳೆದುಕೊಳ್ಳುವುದೂ ಅಲ್ಲ, ಮತ್ತೊಂದನ್ನು ಪಡೆಯುವುದು ಅಲ್ಲ. ಹಳೆಯ ಸಮಾಜದ ತಳಹದಿಯ ಮೇಲೆ ಹೊಸತನವನ್ನು ಸಮಗ್ರವಾಗಿ ಮೈಗೂಡಿಸಿಕೊಳ್ಳುವುದು. ಆಧುನಿಕತೆ ಎನ್ನುವುದು ಸಮಾಜದ ಮನೋಧರ್ಮವನ್ನು ರೂಪಿಸುವಂತಹದು. ಆಧುನಿಕತೆಯ ಮುಖ್ಯ ಪರಿಕಲ್ಪನೆಗಳಾದ ಸ್ವಾವಲಂಬನೆ, ಸ್ತ್ರೀಸ್ವಾತಂತ್ರ್ಯ, ಸಾಮಾಜಿಕ ಸಮಾನತೆ, ಆರ್ಥಿಕ ಸಮಾನತೆ, ಸಾಂಸ್ಕೃತಿಕ ಸಮಾನತೆ, ಹೆಣ್ಣು–ಗಂಡುಗಳ ನಡುವಿನ ಸಂಬಂಧ ಮುಂತಾದವು. ಹೆಣ್ಣು ಹೆಚ್ಚು ವಿದ್ಯಾವಂತಳಾದಷ್ಟು ಸೂಕ್ಷ್ಮವಾದ ಮನಸ್ಥಿತಿಯಿಂದ ಮಾತು ಕಡಿಮೆ ಮೌನ ಜಾಸ್ತಿ ಎಂಬ ಹಂತ ತಲುಪುತ್ತಾ ಹಾಗೂ ಪ್ರತಿಯೊಂದು ಘಟನೆ, ಸನ್ನಿವೇಶವನ್ನು ನಾಜೂಕಾಗಿ ನೋಡುವ ಅವಲೋಕಿಸುವ ಬೌದ್ಧಿಕತೆಯನ್ನು ರೂಢಿಸಿಕೊಂಡಿರುವುದು ಇಲ್ಲಿನ ಕಥೆಗಳಲ್ಲಿ ಕಂಡುಬರುತ್ತದೆ.

"ಕಥೆ ಬರೆಯಲು ಹೊರಟಾಗ ಅವರ ಪೂರ್ಣ ಚಿತ್ರ ನನಗೆ ತಿಳಿದಿರುವುದಿಲ್ಲ. ಮಬ್ಬಾಗಿ ಹಂದರವೊಂದು ಮನಸ್ಸಿನಲ್ಲಿ ರೂಪುಗೊಳ್ಳುತ್ತದೆ. ಸಮಯ ಸರಿದಂತೆ ಅದಕ್ಕೆ ಪೂರಕವಾದ ಘಟನೆಗಳು, ವಿಚಾರಗಳು ಸಿಗುತ್ತವೆ. ಸಮಯ ಸರಿದಂತೆ ಅಗತ್ಯವಾದ ಅಧ್ಯಯನವನ್ನು ಕೈಗೊಂಡಿರುತ್ತೇನೆ. ಬರೆಯುತ್ತಾ ಬರೆಯುತ್ತಾ ಒಂದು 'ಫಸಲ್'ನ ಒಂದೊಂದೇ ತುಂಡುಗಳು ಮೂಡಿ ನನಗೇ ಆನೇಕ ಬಾರಿ ಅಚ್ಚರಿಯಾಗಿರುತ್ತದೆ. ಕತೆ ಬರೆಯವ ಅನಿವಾರ್ಯ ನನಗಿದೆ. ನನ್ನೊಳಗೆ ಕಾಡಿದ, ಅದೆಷ್ಟೋ ದಿನ, ತಿಂಗಳು, ವರ್ಷಗಳು ಕಾಡಿದ ವಿಷಯಗಳ ಸ್ಪಷ್ಟತೆಗೆ, ಒಳಗೊಳಗೆ ಗಸ್ತು ಹೊಡೆದು ಕದಡಿದ ವಿಚಾರಗಳ ಉಚ್ಚಾಟನೆಗೆ ನಾನು ಕಥೆ ಬರೆಯಲು ತೊಡಗುತ್ತೇನೆ. ಬರೆದಂತೆ ನನ್ನನ್ನು ನಾನು ಕಂಡುಕೊಳ್ಳುವುದು ಸಾಧ್ಯವಾಗಿದೆ. ಬರಹ ಸ್ವ–ಅನ್ವೇಷಣೆಯ ಬರದಂತೆ ನನ್ನ ವಿಚಾರಗಳು ನನಗೆ ಸ್ಪಷ್ಟವಾಗಿವೆ. ಬರಹ ಸ್ವ ಅನ್ವೇಷಣೆಯ ಮಾಧ್ಯಮವಾಗಿದೆ."[೧] ಹೀಗೆ ಬರೆಯುವ ಹಿನ್ನೆಲೆಯ ತುಡಿತವನ್ನು ಮತ್ತು ನಂತರದ ನಿರಾಳವನ್ನು ನೇಮಿಚಂದ್ರರವರು ತಿಳಿಸಿದ್ದಾರೆ. ಬದುಕನ್ನು ನೋಡುವ ನೇಮಿಚಂದ್ರರ ದೃಷ್ಟಿ ಸಕಾರಾತ್ಮಕವಾದದ್ದು. ಆರೋಗ್ಯಪೂರ್ಣವಾದದ್ದು. ಬದುಕಿನಲ್ಲಿ

ಎದುರಾಗುವ ಪರಿಸ್ಥಿತಿಯ ಸಕಲ ಸಾಧ್ಯತೆಗಳನ್ನೂ ಸಂಯಮದಿಂದ ಪರಾಮರ್ಶಿಸುವುದು, ಹೊಸ ಅರಿವಿನತ್ತ ಮುಖ ಮಾಡುವುದು ನೇಮಿಚಂದ್ರ ಕಥೆಗಳ ಬಹುಮುಖ್ಯ ಗುಣ.

'ಏನೊಂದು ಆಗದವರು' ಕಥೆಯಲ್ಲಿ ವಿದ್ಯೆಯಿಂದಾಗುವ ಮಾನಸಿಕ ಮತ್ತು ಬೌದ್ಧಿಕ ಬೆಳವಣಿಗೆಯನ್ನು ಶಶಿಯ ಪಾತ್ರದಲ್ಲಿ ಗುರುತಿಸಬಹುದು. ಶಶಿ ಮನೆಯವರನ್ನು ಒಪ್ಪಿಸಿ ಹಂತ ಹಂತವಾಗಿ ಓದುತ್ತ ಇಂಜನಿಯರಿಂಗ್ ಪದವಿ ಪಡೆಯುತ್ತಾನೆ. 'ಅಮ್ಮ ಎಂಥದ್ದೋ ಒಂದು ಬಿ.ಎ., ಬಿ.ಎಸ್ಸಿ., ಅಂತ ಒಂದು ಡಿಗ್ರಿ ಮುಗಿಸಿ ಮದುವೆ ಆಗು' ಎಂತ ಗೊಣಗಿದರೂ, ರವಿ ಪರಿಚಯಿಸಿದ ಕಂಪ್ಯೂಟರ್ ಜಗತ್ತು ಕೈ ಬೀಸಿತ್ತು. ಎಂಜನಿಯರಿಂಗ್ ಸೇರಿದ್ದೆ. ಎರಡನೇ ವರ್ಷಕ್ಕೆ ಬರುತ್ತಿದ್ದಂತೆ–ಕಂಪ್ಯೂಟರಿನ ಒಳಹೊರಗುಗಳು ತೆರೆದುಕೊಳ್ಳುತ್ತಿದ್ದಂತೆ–ರವಿ ಓರ್ವ ಟೈಪಿಸ್ಟಿಗಿಂತ ಹೆಚ್ಚೇನೂ ಕೆಲಸ ಮಾಡಿರಲಿಲ್ಲ ಎಂದು ಅರಿವಾಗಿತ್ತು. ಸಿದ್ಧ ಕಂಪ್ಯೂಟರ್ 'ಕಾರ್ಯ ಸರಣಿ'ಗಳನ್ನು ಮಾಡಿರಲಿಲ್ಲ. ಉಪಯೋಗಿಸುವುದಷ್ಟೇ ಅವನಿಗೆ ಗೊತ್ತಿತ್ತು. ಈಗ ನನ್ನ ಯಾವುದೇ ಪ್ರಶ್ನೆಗಳಿಗೆ ಅವನಲ್ಲಿ ಉತ್ತರವಿರಲಿಲ್ಲ, ನಾನು ಎಂಜನಿಯರಿಂಗ್‌ನ ಒಂದೊಂದೇ ವರ್ಷ ಫಸ್ಟ್ ಕ್ಲಾಸ್, ರ್‍ಯಾಂಕ್ ಎಂದು ಪಾಸಾದಂತೆ, ರವಿ ನನ್ನ ಬದುಕಿನ ಒಂದೊಂದೇ ಮೆಟ್ಟಿಲಲ್ಲಿ ನಪಾಸಾಗುತ್ತ ಇಳಿದ. ನಾನು ಬೆಳೆದಷ್ಟು ಆವ ಕುಬ್ಜನಾದ"[೨] ಎಂಬಲ್ಲಿ ಸ್ತ್ರೀ ಉನ್ನತ ವಿದ್ಯೆಯನ್ನು ಪಡೆದಾಗ ಸಮಾಜವನ್ನು ನೋಡುವ ದೃಷ್ಟಿಕೋನ ಪ್ರಬುದ್ಧವಾಗುವಂತದ್ದನ್ನು ತಿಳಿಸುತ್ತದೆ. ಮುಖ್ಯವಾಗಿ ವಿದ್ಯಾವಂತ ಹೆಣ್ಣು ತನ್ನ ಬದುಕಿನ ನಿರ್ಧಾರವನ್ನು ತಾನೇ ತೆಗೆದುಕೊಳ್ಳುವ ಜೊತೆಗೆ ಸಂಪ್ರದಾಯವನ್ನು ನಯವಾಗಿ ವಿರೋಧಿಸುತ್ತಾ ಆಧುನಿಕತೆಗೆ ಒಗ್ಗಿಕೊಳ್ಳುವ ಕ್ರಿಯೆಯನ್ನು ಇಲ್ಲಿ ಗುರುತಿಸಬಹುದು.

'ಕಳೆಯ ಬೇಕಿದೆ ನಿನ್ನ ಜೊತೆಯಲ್ಲಿ ಒಂದು ಶ್ಯಾಮಲ ಸಂಜೆ' ಕಥೆಯ ವಿದ್ಯಾಭ್ಯಾಸವನ್ನು ಮುಂದುವರಿಸುವ ಅಪೇಕ್ಷೆ ಅಹಲ್ಯೆ ಪಾತ್ರದಲ್ಲಿ ವ್ಯಕ್ತವಾಗಿದೆ. ಎಲ್ಲ ಸರಿ ಇದ್ದಂತೆ ಕಂಡ ನಾಲ್ಕು ವರ್ಷದನಂತರ ಅತ್ತೆ ಮಾವ ತಿರುಪತಿಗೆ ಹೋದಾಗ ಅಪಘಾತವಾಗಿ ಇಬ್ಬರೂ ತೀರಿಕೊಳ್ಳುತ್ತಾರೆ. ನಂತರ ರವಿಯ ವಿವಾಹಪೂರ್ವ ಪ್ರೇಮ ಮತ್ತೆ ಚಿಗುರೊಡೆಯುತ್ತದೆ. ಕೊನೆಗೆ ರವಿ ಅಹಲ್ಯೆಗೆ ವಿಚ್ಛೇದನವನ್ನು ನೀಡುತ್ತಾನೆ. ತೀರಾ ಸಂಪ್ರದಾಯಸ್ಥಳಾಗಿ ಬೆಳೆದಿದ್ದ ಅಹಲ್ಯೆಯ ಬದುಕು ಆಕಸ್ಮಿಕ ತಿರುವುಗಳನ್ನು ಪಡೆಯುತ್ತದೆ. "ಅಹಲ್ಯೆಗೆ ಮಗುವಾಯಿತು. ಅವಳು ಮನೆಗೆ ಹತ್ತಿರವೇ ಇದ್ದ ಎಂಜನಿಯರಿಂಗ್ ಕಾಲೇಜು ಸೇರಿದ್ದಳು, ನಾನು ಕಾರ್ಖಾನ ಕೆಲಸ ಹಿಡಿದಿದ್ದೆ."[೩] ಇದು ಆಧುನಿಕ ಕಾಲದ ಹೆಣ್ಣಿನ ಅವಶ್ಯಕತೆಯು ಹೌದು, ಅನಿವಾರ್ಯವು ಹೌದು, ಏಕೆಂದರೆ ಅಪ್ಪ ಅಮ್ಮಂದಿರ ಒತ್ತಡಕ್ಕೆ ಮಣಿದು ರವಿ ಅಹಲ್ಯೆಯನ್ನು ಮದುವೆಯಾಗಿದ್ದ. ತನಗೆ ಬೇಕನ್ನಿಸಿದ್ದನ್ನು ಪಡೆಯಲು ಎಲ್ಲಾ ಜವಾಬ್ದಾರಿಗಳಿಂದ ಸುಲಭವಾಗಿ ರವಿ ಕಳಚಿಕೊಂಡಾಗ ಎದೆಗುಂದದೆ ಸ್ವಾಭಿಮಾನಿಯಾಗಿ ಅಹಲ್ಯೆ ಬದುಕನ್ನು ಎದುರಿಸುತ್ತಾಳೆ. "ಉನ್ನತ ಸ್ತರದಲ್ಲಿದ್ದು ಜವಾಬ್ದಾರಿಯುತ ಹುದ್ದೆಯಲ್ಲಿರುವ ಪ್ರತೀಕಗಳು ನೇಮಿಚಂದ್ರ ಅವರ ಕಥೆಗಳಲ್ಲಿ ಪ್ರತಿಬಿಂಬಿಸಿವೆ"[೪] ಹೀಗೆ ನೇಮಿಚಂದ್ರರ ಬಹುತೇಕ ಕಥೆಗಳಲ್ಲಿ ಉನ್ನತ ವಿದ್ಯೆಯನ್ನು ಆಧರಿಸಿದ ಉದ್ಯೋಗಸ್ಥ ಪಾತ್ರಗಳ ಸಂವೇದನೆ ನಿರೂಪಿತವಾಗಿದೆ.

ಸ್ವಾವಲಂಬನೆ ಎಂದರೆ ತನಗಾಗಿ ಬೇರೆಯವರನ್ನು ಆಶ್ರಯಿಸದಿರುವುದು, ಇದನ್ನು ಎರಡು ರೀತಿಯಲ್ಲಿ ನೋಡಲಾಗಿದೆ. ಒಂದು ಆರ್ಥಿಕ ಸ್ವಾವಲಂಬನೆ ಮತ್ತೊಂದು ಮಾನಸಿಕ ಸ್ವಾವಲಂಬನೆ. ವಿದ್ಯಾಭ್ಯಾಸ ಪಡೆದ ಸ್ತ್ರೀ ಉದ್ಯೋಗನಿರತಳಾಗಿ ದುಡಿಮೆಗೆ ಪ್ರತಿಫಲ ಪಡೆಯುವುದು ಆರ್ಥಿಕ ಸ್ವಾವಲಂಬನೆ. ಆಧುನಿಕ ವಿದ್ಯಾಭ್ಯಾಸ ನಡೆದ ಸ್ತ್ರೀ ತನ್ನ ಬದುಕನ್ನು ಕುರಿತ ನಿರ್ಧಾರಗಳನ್ನು ತೆಗೆದುಕೊಳ್ಳಲಿಚ್ಚಿಸುವಾಗ ಸಹ ಬಹುತೇಕ ಸ್ವಾವಲಂಬಿಯಾಗಿ ಅಥವ ಅಂತರಂಗದ ಅವಲೋಕನ ಮಾಡುತ್ತ ಸ್ವಾಭಿಮಾನವುಳ್ಳ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದು ಮಾನಸಿಕ ಸ್ವಾವಲಂಬನೆ.

"ಭಯ ಸಂಕೋಚ, ಮುಜುಗರಗಳನ್ನು ಬದಿಗಿಟ್ಟು ನನಗನ್ನಿಸಿದ್ದನ್ನು ಅನಿಸಿದಂತೆ ಬರೆಯಹೊರಟಿದ್ದು, ಬಿ.ಇ ಮುಗಿಸಿ ಸಂಶೋಧನೆಗೆಂದು ಬೆಂಗಳೂರಿಗೆ, ಟಾಟಾ ಇನ್‌ಸ್ಟಿಟ್ಯೂಟಿಗೆ ಬಂದಾಗ. ಅವಲಂಬನೆಯ ಅಧ್ಯಾಯ ಮುಗಿದಿತ್ತು. ಸ್ವತಂತ್ರ ವಾತಾವರಣದಲ್ಲಿ, ಆರ್ಥಿಕ ನನ್ನ ಸ್ವಾವಲಂಬನೆಯಲ್ಲಿ ನನ್ನ ಭಾವನೆಗಳು ಹೊರಬಿದ್ದವು."[೫] ಇದು ನೇಮಿಚಂದ್ರರ ಆರ್ಥಿಕ ಮತ್ತು ಮಾನಸಿಕ ಸ್ವಾವಲಂಬನೆಯ ಕಥಾಭಿವ್ಯಕ್ತಿಗೆ ಪ್ರೇರಣೆಯಾದುದನ್ನು ಸೂಚಿಸುತ್ತದೆ.

"ಇವರೆಲ್ಲರ ಗೆಳೆತನದ ನಡುವಿನಲ್ಲೂ ನನ್ನ ಅರಿವು ಮೂಡಿದಾಗಿನಿಂದ ನಾನು ವಿವಾಹಕ್ಕಿಂತ, ವಿದ್ಯೆಗೆ, ಆರ್ಥಿಕ ಸ್ವಾವಲಂಬನೆಗೆ ಹೆಚ್ಚು ಮಹತ್ವ ಕೊಟ್ಟಿದ್ದರೆ, ನನ್ನ ವ್ಯಕ್ತಿತ್ವ ಅವನ್ನು ಪ್ರತಿಪಾದಿಸಲು ಪದೇ ಪದೇ ಪ್ರಯತ್ನಿಸಿದ್ದರೆ, ನನ್ನಂತೆ ಬದುಕಲು ಬಯಸಿದ್ದರೆ, ಅದಕ್ಕೆ ಅಲ್ಲೆಲ್ಲೋ ನಾನು ಹುಟ್ಟಿ ಬೆಳೆದ ಪರಿಸರ ಕಾರಣವಿದ್ದಿರಬೇಕು ಅನಿಸುತ್ತದೆ"[೬] ಎಂಬ ನೇಮಿಚಂದ್ರರ ಮಾತು ಅವರ ಕಥೆಗಳಲ್ಲಿ ಅಂತರ್ಗತವಾದ ಜೀವನ ದ್ರವ್ಯವನ್ನು ಸೂಚಿಸುತ್ತದೆ.

'ಕಪ್ಪು ಮೋಡ ಬೆಳ್ಳಿ ಅಂಚು' ಎಂಬ ಕಥೆಯ ಕೇಂದ್ರ ಪಾತ್ರ ಮಧು, ರವಿಯಿಂದ ಪರಿತ್ಯಕ್ತಳಾಗುತ್ತಾಳೆ, ಗೆಳತಿ ಶೀಲಾಳ ನೆರವಿನಿಂದ, ಸಾಂತ್ವನದಿಂದ ನಿರಾಸಕ್ತಿಯನ್ನು ಬದಿಗೊತ್ತಿ ಛಲದಿಂದ ಬದುಕು ನಡೆಸಿ ತೋರಿಸುತ್ತಾಳೆ. ಬದುಕಿನ ಹೋರಾಟವನ್ನು ಧೈರ್ಯ ಮತ್ತು ತಾಳ್ಮೆಯಿಂದ ಎದುರಿಸಬೇಕಾದ ಅಗತ್ಯವನ್ನು ಸೂಚಿಸುತ್ತದೆ. ರವಿಯಿಂದ ಪರಿತ್ಯಕ್ತಳಾದ ಮಧುಗೆ ಜೀವನ್ಮುಖಿಯಾಗಿ, ಸ್ವಾವಲಂಬಿಯಾಗಿ ಬದುಕನ್ನೆದುರಿಸಲು ನೆರವಾದುದು ಗೆಳತಿ ಶೀಲಾ.

- "–ನನ್ನ ಹಣ ನನಗೆ ಬಹಳಷ್ಟನ್ನು ಕೊಡಬಲ್ಲದು.
- –ಪುಟ್ಟಿಯ ಭವಿಷ್ಯವನ್ನು ಕೊಡಬಲ್ಲದು.
- –ನನ್ನ ನಾಳೆಗಳನ್ನು ಕೊಡಬಲ್ಲದು.
- –ನನ್ನ ಕಳಕೊಂಡ ಆತ್ಮವಿಶ್ವಾಸವನ್ನು ಕೊಡಬಲ್ಲದು"[೭] ಬದುಕನ್ನು ಏಕಾಂಗಿಯಾಗಿ ಎದುರಿಸಬೇಕಾಗಿ ಬರಬಹುದೆಂಬ ಸಣ್ಣ ಸುಳಿವು ಸಹ ಮದುಗೆ ಇರಲಿಲ್ಲ. ಆದರೆ ಬದುಕೆ ಹಂತ ಹಂತವಾಗಿ ಪಾಠವನ್ನು ಕಲಿಸುತ್ತದೆ. ಬದುಕನ್ನು ಈಜುವ ಎದೆಗಾರಿಕೆಯ ಕೌಶಲ್ಯಗಳನ್ನು ರೂಢಿಸಿಕೊಳ್ಳಬೇಕಾದ ಅನಿವಾರ್ಯತೆಯ ಸೂಚನೆ ಕಥೆಯಲ್ಲಿ ನಿರೂಪಿತವಾಗಿದೆ.

'ನೀನಿರುವ ನಮ್ಮೊಡನೆ' ಕಥೆಯಲ್ಲಿ ರವಿಯು ಮಿದುಳು ಕ್ಯಾನ್ಸರ್ ಪೀಡಿತನಾಗಿ ಸಾವು ಬದುಕಿನ ಮದ್ಯದ ಹೋರಾಟದ ಕೊನೆಯ ಹಂತದಲ್ಲಿದ್ದಾಗ ಚರಿತ ಮನೆ, ಆಸ್ಪತ್ರೆಗಳ ಜವಾಬ್ದಾರಿಯನ್ನು ವಹಿಸಿಕೊಂಡು ಮಗುವಿನ ಯೋಗಕ್ಷೇಮ ನೋಡಿಕೊಂಡು ಬದುಕಿನೊಂದಿಗೆ ಹೋರಾಡುತ್ತಾಳೆ, ಮನೆಯ ಆರ್ಥಿಕ ಪರಿಸ್ಥಿಯ ಅರಿವಿದ್ದ ಹಾಗೂ ಭವಿಷ್ಯದ ಬಗ್ಗೆ ಆಲೋಚಿಸುತ್ತಿದ್ದ ಚರಿತ ರವಿಯೊಂದಿಗೆ ಆಡಿದ ಮಾತುಗಳು ಹೀಗೆ ಮೂಡಿ ಬಂದಿವೆ. "ಛಿದ್ರದೇಹಕ್ಕಂಟಿ ನರಳಿದ ಜೀವ ಬಿಡುಗಡೆಗೆ ತವಕಿಸಿತ್ತು. ಮೆಲ್ಲನೆ ಹೇಳಿದೆ 'ರವಿ, ರಾಜಾಜಿನಗರದ ಶಾಲೆಯಲ್ಲಿ ಒಂದು ಪೋಸ್ಟ್ ಖಾಲಿ ಇದೆಯಂತೆ ಸೇರಲಾ..?' ನೀ ಕಣ್ಣರಳಿಸಿದೆ. ನೀನಿದ್ದಂತೆ ನನ್ನ ಬದುಕುವ ತಯಾರಿ ನಡೆದಿತ್ತು."[೮] ಆಧುನಿಕ ಬದುಕಿನ ಪ್ರಯಾಣಕ್ಕೆ

ಅಗತ್ಯವಾಗಿ ಬೇಕಾದಕೆಲಸ ಹಾಗೂ ಅದರೊಂದಿಗಿನ ಆರ್ಥಿಕ ಸ್ವಾವಲಂಬನೆಯನ್ನು ಕಥೆಯಲ್ಲಿ ಗುರುತಿಸಬಹುದು.

ಹಾಗೆಯೇ 'ಬದುಕು ಕಾಯುವುದಿಲ್ಲ' ಕಥೆಯಲ್ಲಿನ ಬ್ಯಾಂಕಿನಲ್ಲಿ ದುಡಿಯುವ ಶಶಿ 'ಇತಿಹಾಸದಂಚಿನಲ್ಲಿ...' ಕಥೆಯ ಇಂಜಿನಿಯರ್ ಆದ ಶಶಿ, 'ಕಳೆಯ ಬೇಕಿದೆ ನಿನ್ನ ಜೊತೆಯಲಿ ಒಂದು ಶ್ಯಾಮಲ ಸಂಜೆ'ಯ ಆಹಲ್ಯೆ, 'ಮತ್ತೆ ಬರೆದ ಕವನಗಳು' ಕಥೆಯ ಡಾ.ಅನು, 'ನೀವು ಕಾಣದ ನಾಳೆಗಳಲ್ಲಿ...' ಕಥೆಯ ಶಶಿ, 'ತೆರೆಗಳು ಸರಿದವು' ಕಥೆಯ ಅಚಲ ಮುಂತಾದ ಸ್ತ್ರೀಪಾತ್ರಗಳಲ್ಲಿ ಉದ್ಯೋಗ ಮತ್ತು ಸ್ವಾವಲಂಬನೆಯ ಪ್ರಾಮುಖ್ಯತೆಯನ್ನು ಗುರುತಿಸಬಹುದು. ಶಿಕ್ಷಣದಿಂದ ಉದ್ಯೋಗ ಅದರಿಂದ ಆರ್ಥಿಕ ಸ್ವಾವಲಂಬನೆ, ಮಾನಸಿಕ ಸ್ವಾವಲಂಬನೆ ಸಿಗಲು ಸಾಧ್ಯ. ಇವುಗಳಿಂದ ಸಮಾಜದಲ್ಲಿ ಸ್ವಲ್ಪಮಟ್ಟಿಗಾದರೂ ಸಮಾನತೆ ಸ್ವಾತಂತ್ರ್ಯಗಳು ದೊರೆಯಬಹುದು ಎನ್ನುವ ಸ್ತ್ರೀಸಂವೇದನೆ ನೇಮಿಚಂದ್ರರ ಕಥೆಗಳಲ್ಲಿನಿಚ್ಚಳವಾಗಿ ಮೂಡಿ ಬಂದಿವೆ.

**ಆಧುನಿಕ ಬದುಕಿನ ವಿಪರ್ಯಾಸ:** ಆಧುನಿಕ ಬದುಕು ಸುಗಮವಾಗಿ ಸಾಗುವ ಬದಲು ಕೆಲವೊಮ್ಮೆ ಅದು ತಂದೊಡ್ಡುವ ಸವಾಲುಗಳು ನೇಮಿಚಂದ್ರ ಕಥೆಗಳಲ್ಲಿ ಅಭಿವ್ಯಕ್ತಗೊಂಡಿವೆ. ವಿಜ್ಞಾನ, ತಂತ್ರಜ್ಞಾನಗಳ ಯಾಂತ್ರಿಕ ಜಗತ್ತು ಆಧುನಿಕ ಮನುಕುಲವನ್ನು ತನ್ನ ಬಿಗಿ ಹಿಡಿತದಲ್ಲಿ ಬಂಧಿಸಿದೆ. ಆಧುನಿಕತೆಯ ಬೆನ್ನು ಹತ್ತಿದ ಮನುಷ್ಯರು ತೀರಾ ಶ್ರೀಮಂತರಾಗುವ ಮತ್ತು ಎಲ್ಲಾ ರೀತಿಯ ಸುಖ–ಭೋಗಗಳ ಬಯಕೆಗಳಿಂದ ನಾನಾ ಸವಾಲುಗಳು, ಸಮಸ್ಯೆಗಳನ್ನು ತಾವೇ ಆಹ್ವಾನಿಸಿಕೊಳ್ಳುತ್ತಿದ್ದಾರೆ. ಆಧುನಿಕ ಹೆಣ್ಣು ಮನೆಯ ಒಳಗೂ ಮತ್ತು ಹೊರಗೂ ದುಡಿಯುವುದು ಹೆಚ್ಚಿನ ಸವಾಲುಗಳಿಗೆ ಗುರಿಯಾಗುತ್ತಿದ್ದಾಳೆ. ಅದರಲ್ಲಿ ಪ್ರಮುಖವಾಗಿ ಕಂಡುಬರುವುದು ಸಮಯದ ನಿರ್ವಹಣೆ ಮತ್ತು ಒತ್ತಡ. "ಸಮಯದ ಒತ್ತಡವೇ ನಾನು ಸದ್ಯಕ್ಕೆ ಎದುರಿಸುತ್ತಿರುವ ಬಹು ದೊಡ್ಡ ಸವಾಲು"[೯] ಎಂಬ ಮಾತುಗಳಲ್ಲಿ ಉದ್ಯೋಗಸ್ಥ ಮಹಿಳೆಯ ಸವಾಲುಗಳ ಅರಿವಾಗುತ್ತದೆ. ಮೊದಲು ಮನೆಯ ನಿರ್ವಹಣೆಯ ಜವಾಬ್ದಾರಿ ಮಾತ್ರ ಇತ್ತು. ಇಂದು ದುಡಿದು ಸಂಸಾರವನ್ನು ನಿಬಾಯಿಸುವ ಎರಡೂ ಜವಾಬ್ದಾರಿಗಳಿಂದ ಕಂಗೆಟ್ಟಿದ್ದಾಳೆ. ಇಂದಿನ ಆಧುನಿಕ ಕುಟುಂಬಗಳು ವಿಭಕ್ತ ಕುಟುಂಬಗಳಾಗಿದ್ದು ಗಂಡ, ಹೆಂಡತಿ ಅಥವ ಮಕ್ಕಳ ಬದುಕಿನಲ್ಲಾಗುವ ಸಣ್ಣ ಬದಲಾವಣೆ ಇಡೀ ಕುಟುಂಬದ ಮೇಲೆ ಅದರಲ್ಲೂ ಹೆಣ್ಣಿನ ಮೇಲೆ ಹೆಚ್ಚು ಪರಿಣಾಮವನ್ನು ಉಂಟುಮಾಡುತ್ತದೆ.

'ಮರಳಿ ಬದುಕಿಗೆ ಪಯಣ' ಕಥೆಯ ರಿಪುದಮನನ ಬದುಕೆ ಒಂದು ಹೋರಾಟ. ಸುತ್ತಲಿನವರೊಡನೆ ಹೋರಾಡುತ್ತ ನಮ್ಮ ಅಸ್ತಿತ್ವ ಉಳಿಸಿಕೊಳ್ಳುವಿಕೆ ಒಂದು ಯುದ್ಧದಂತೆ ಇದೆ. ಬದುಕು ಭೂತಕಾಲದ ಆಧಾರದೊಂದಿಗೆ ಭವಿಷ್ಯದ ಕನಸುಗಳೊಂದಿಗೆ ವರ್ತಮಾನದಲ್ಲಿ ಚಲಿಸುತ್ತಿರುತ್ತದೆ. ಆ ವರ್ತಮಾನವನ್ನು ನಮ್ಮದಾಗಿಸಿಕೊಳ್ಳುವಲ್ಲಿ ರಿಪುವಿನ ಜೀವನ, ಜೀವನಪ್ರೀತಿ ಅದಕ್ಕಾಗಿ ಪ್ರತಿಕ್ಷಣದ ಉಳಿಸಿಕೊಳ್ಳುವಿಕೆಯ ಹೋರಾಟ ಅದಮ್ಯ ಆಶಾವಾದ ಕಥೆಯಲ್ಲಿ ಚಿತ್ರಣಗೊಂಡಿದೆ. ರಿಪುವಿನ ದೀಪದ ಬೆಳಕಿನಿಂದಲೆ ಸುಧಾಳ ಬದುಕು ಬೆಳಗಬಲ್ಲದು. ಕತ್ತಲನ್ನು ಶಪಿಸುತ್ತ ಕುಳಿತುಕೊಳ್ಳುವುದಕ್ಕಿಂತ ಸಣ್ಣ ಹಣತೆಯನ್ನು ಹಚ್ಚಿ ಅದರ ಬೆಳಕಿನಿಂದ ಬದುಕನ್ನು ನೋಡುವ ಪ್ರಯತ್ನ ಇಲ್ಲಿದೆ. ತಾಳ್ಮೆ, ಆಶಾವಾದದಿಂದ ಮಾತ್ರ ನಾವು ಏನನ್ನಾದರು ಸಾಧಿಸಬಹುದೆಂಬುದು ಇಲ್ಲಿ ಮನದಟ್ಟಾಗುತ್ತದೆ. ಕೆಲಸಕ್ಕಿಂತ, ಹಣಕ್ಕಿಂತ ಬದುಕು ಮುಖ್ಯವೆಂಬ ಅಂಶ ಇಲ್ಲಿದೆ. ಬದುಕಲು ಮುಖ್ಯವಾಗಿ ಧನಾತ್ಮಕವಾದ ಆಲೋಚನೆಗಳು ಮತ್ತು ಪ್ರಯತ್ನಗಳ ಹಾದಿ ಮುಖ್ಯ. ಇದು ಜೀವನಪ್ರೀತಿಯಿಂದ ಮಾತ್ರ ಸಾಧ್ಯ.

'ನೀನಿರುವ ನಮ್ಮೊಡನೆ' ಕಥೆಯಲ್ಲಿ ಆಧುನಿಕ ಯಾಂತ್ರಿಕ ಅವಿಶ್ರಾಂತ ಬದುಕನ್ನು ಮತ್ತು ಹಣದ ಬೆನ್ನು ಹತ್ತುವ ಮನುಷ್ಯರು ಎದುರಿಸಬೇಕಾದ ಸಮಸ್ಯೆಗಳನ್ನು ಅದರೊಂದಿಗಿನ ಹೋರಾಟವನ್ನು ಕುರಿತು ಹೇಳುತ್ತದೆ. ಸ್ಪರ್ಧಾತ್ಮಕ ಯುಗದಲ್ಲಿ ಮನುಷ್ಯನ ಒತ್ತಡದ ಬದುಕನ್ನು, ಮನುಷ್ಯ ಸಂಬಂಧಗಳ ನಶಿಸುವಿಕೆಯನ್ನು ತಿಳಿಸುತ್ತದೆ. "ಕಳೆದೆರಡು ದಶಕಗಳಿಂದ ಹೆಣ್ಣು ಶಿಕ್ಷಣ ಹಾಗೂ ಉದ್ಯೋಗವಕಾಶ ಪಡೆಯುವಂತಾದುದು ಆಕೆಗೆ ಸ್ವಲ್ಪ ಮಟ್ಟಿಗಿನ ಬಿಡುಗಡೆಯ ಅನುಭವ ತಂದುಕೊಟ್ಟಿದ್ದು ನಿಜವಾದರೂ, ಅದು ಇನ್ನೊಂದು ನೆಲೆಯಲ್ಲಿ ಹಲವು ಬಗೆಯ ಆತಂಕವನ್ನು ಮಹಿಳಾ ಬದುಕಿಗೆ ತಂದೊಡ್ಡಿದ್ದೂ ಅಷ್ಟೇ ನಿಜ. ಹೆಣ್ಣಿಗೆ ಲಭ್ಯವಾದ ಹೊರದುಡಿಮೆಯ ಹೊಸ ಅವಕಾಶ ಗಂಡೊಬ್ಬನಿಗೆ ಒದಗುವ ಅನುಭವದಂತಲ್ಲ. ಹೆಣ್ಣು ಹೊರದುಡಿಮೆಗೆ ಬರುವುದನ್ನು ಒಪ್ಪಿಕೊಂಡಂತೆ ಆಕೆಯ ಮನೆಯೊಳಗಿನ ಜವಾಬ್ದಾರಿಗಳ ಹಂಚಿಕೆಯನ್ನು ಲಿಂಗವ್ಯವಸ್ಥೆ ಒಪ್ಪಿಕೊಳ್ಳಲು ಸಾಧ್ಯವಾಗಿಲ್ಲ. ಹೀಗಾಗಿ ಹೆಣ್ಣು ಕುಟುಂಬದೊಳಗಿನ ಎಲ್ಲ ದುಡಿಮೆ–ಜವಾಬ್ದಾರಿಗಳನ್ನು ನಿರ್ವಹಿಸುತ್ತಲೇ ಹೊರದುಡಿಮೆಯನ್ನು ಮಾಡಬೇಕಾದ ಅನಿವಾರ್ಯಕ್ಕೆ ಸಿಲುಕಿದ್ದಾಳೆ. ಇದರಿಂದ ಆಕೆಗೆ ದುಪ್ಪಟ್ಟು ಶ್ರಮದ, ಒತ್ತಡದ ಹೊರೆ ಬೀಳುತ್ತದೆ."[೧೦] ಎಂಬ ಮಾತು ಸತ್ಯ.

'ಬದುಕು ಕಾಯುವುದಿಲ್ಲ' ಕಥೆಯಲ್ಲಿ ಸಂಯುಕ್ತ "ಆ ಶ್ರೀಮನ್ನಾರಾಯಣ ಹತ್ತು ಅವತಾರಗಳಲ್ಲಿ ಮಾಡಿದ್ದೆಲ್ಲವನ್ನೂ ನಾವು ಹೆಂಗಸರು ಒಂದೇ ಜನ್ಮದಲ್ಲಿ ಮಾಡಿತೋರಿಸಬೇಕಾಗಿದೆ ನೋಡು' ಎನ್ನುತ್ತಿದ್ದಳು. ಮನೆ, ಕಛೇರಿ ಎಲ್ಲದರ ನಡುವೆ ಎಡತಾಡುತ್ತಾ, ಒಳಗಿಂದೂ ಹೊರಗಿಂದೂ ಎಲ್ಲಾ ಅವಳೇ ನಿಭಾಯಿಸುವಾಗ ನಾ ಪಡಕೊಂಡೆ ಎಂದು ಹಿಗ್ಗಿದ್ದೆ. ನಾ ನಿಜಕ್ಕೂ ಕಳಕೊಂಡೆನೆ, ಬದುಕಿನ ಅಮೂಲ್ಯ ಕ್ಷಣಗಳನ್ನು, ಮತ್ತೆ ಬಾರದ ಮನೆಯ ಒಳಗಿನ ಅನುಭವಗಳನ್ನು?"[೧೧] ಎಂಬ ಮಾತುಗಳಲ್ಲಿ ಆಧುನಿಕ ಬದುಕಿನ ಬೆನ್ನು ಹತ್ತಿದ ಹೆಣ್ಣು ಹೊರಗಿನ ದುಡಿತಗಳನ್ನು ಸಮತೂಗಿಸುವ ಒತ್ತಡದಲ್ಲಿ ತನ್ನ ವೈಯುಕ್ತಿಕ ಬದುಕನ್ನೇ ಬಲಿಕೊಡುತ್ತಿದ್ದಾಳೆ. ಆದರೆ ಈ ಆಧುನಿಕ ಬದುಕಿನಲ್ಲಿ ಪುರುಷನ ದೃಷ್ಟಿಕೋನ ಭಿನ್ನವಾಗಿರುವುದು ವಿಸ್ಮಯನ ಪಾತ್ರದಲ್ಲಿ ಮೂಡಿ ಬಂದಿದೆ. "ಎಲ್ಲಾ ಪ್ರದರ್ಶನದ ಬದುಕು ಸಂಯುಕ್ತಾ, 'ಶೋಬಜ್' ಬರಿ ಸಿನಿಮಾ ನಟರೆ ಮಾತ್ರ ಅಂದುಕೊಂಡೆಯಾ? ಮಾಡಿದ್ದಕ್ಕಿಂತ 'ಮಾಡಿದೆ' ಎಂದು ತೋರಿಸುವುದು ಮುಖ್ಯ. ಮಾಡುವಾಗ ಕಾಣಿಸಿಕೊಳ್ಳುವುದು ಮುಖ್ಯ, ದೊಡ್ಡವರ ಕಣ್ಣಿಗೆ ಬೀಳುತ್ತಿರಬೇಕು. 'ಇಮೇಜ್' ಸೃಷ್ಟಿಸಿಕೊಳ್ಳಬೇಕು, 'ಹ್ಯಾಲೋ' ನೇತು ಹಾಕಿಕೊಳ್ಳಬೇಕು. ನಮ್ಮ ಬಗ್ಗೆ ನಾವೇ ತುತ್ತೂರಿ ಊದಿಕೊಳ್ಳುತ್ತಿರಬೇಕು." ಬಡ್ತಿ, ಹಣ, ಕೀರ್ತಿ, ಪ್ರತಿಷ್ಠೆಗಳ ಗೀಳಿಗೆ ಬಲಿಯಾದ ಮನುಷ್ಯನಿಗೆ ಮಾನವೀಯ ಸಂಬಂಧಗಳ ಮಹತ್ವಕ್ಕೆ ಬೆಲೆ ಕೊಡುವುದಿಲ್ಲ. ಜೀವಂತ ಬಹುತೇಕ ಯಂತ್ರಗಳ ಜೊತೆಗೆ ಕೆಲಸ ಮಾಡುತ್ತಾ ಮನುಷ್ಯನು ಸಹ ಯಂತ್ರವಾಗುತ್ತಾ, ಮನುಷ್ಯ ಭಾವನೆಗಳಿಗೆ ಸ್ಪಂದಿಸುವ ಗುಣಗಳನ್ನು ಕಳೆದುಕೊಳ್ಳುತ್ತಿದ್ದಾನೆ. ಇದು ಪ್ರಸ್ತುತ ಕಥೆಯ ವಿಸ್ಮಯ ತನ್ನ ಮಗು ಬೇಬಿ ಮತ್ತು ತಾಯಿಯ ಅನಾರೋಗ್ಯದ ಸಂದರ್ಭದಲ್ಲಿ ನಡೆದುಕೊಂಡ ನಡವಳಿಕೆಗೆ ಸಾಕ್ಷಿಯಾಗಿದೆ.

'ನೀನಿರುವೆ ನಮ್ಮೊಡನೆ' ಕಥೆಯಲ್ಲಿ ಆಧುನಿಕ, ಯಾಂತ್ರಿಕ ಯುಗದ ಪರಿಣಾಮ ಹಾಗೂ ಆದು ಬದುಕನ್ನು ಹಿಡಿದಿಡುವ ಪರಿ ಅದರ ಪರಿಣಾಮವನ್ನು ತಿಳಿಸುತ್ತದೆ. ಸರ್ಕಾರಿ ಕೆಲಸಕ್ಕೆ ವಿದಾಯ ಹೇಳಿ ಸಾಫ್ಟ್‌ವೇರ್ ಕಂಪನಿಗೆ ಸೇರಿದ ರವಿಗೆ ನಂತರದಲ್ಲಿ ಹಣ, ಬಡ್ತಿ,ಮತ್ತೆ ಇದರಿಂದ ವಿಷಾರಾಮಿ ಬದುಕ ಎಲ್ಲವು ಸಿಗುತ್ತದೆ. ಮತ್ತೆ ಕೆಲವೇ ವರ್ಷಗಳಲ್ಲಿ 'ಗ್ರಿಯೋಮಾ' ಎಂಬ ಮಿದುಳಿನ ಗಡ್ಡೆಕ್ಯಾನ್ಸರ್‌ಗೆ ಸಂಬಂಧಿಸಿದ ಕಾಯಿಲೆಯಿಂದ ಪೀಡಿತನಾಗುತ್ತಾನೆ. ಆಗ ಚರಿತಳಿಗೆ ದಿಕ್ಕು ತೋಚದೆ ಪುಟ್ಟಿಯನ್ನು ನೋಡಿಕೊಳ್ಳುತ್ತ

ಆಸ್ಪತ್ರೆಗೆ ಓಡಾಡುತ್ತ ಬದುಕನ್ನು ನಿರ್ವಹಿಸುತ್ತಾಳೆ. ಜೊತೆಗೆ ಕೆಲಸಕ್ಕೆ ಸೇರುವ ನಿರ್ಧಾರವನ್ನು ಮಾಡುತ್ತಾಳೆ.

**ಕಂಡುಬಂದ ಅಂಶಗಳು:** ಹೆಣ್ಣು ನೇಮಿಚಂದ್ರರ ಕಥೆಗಳ ಕೇಂದ್ರವಾದರೂ ಅವರ ಕಥೆಗಳನ್ನು ಸ್ತ್ರೀವಾದ ಕಥೆಗಳೆಂದು ವರ್ಗೀಕರಿಸಲಾಗದು. ಬದುಕನ್ನು ನೋಡುವ ನೇಮಿಚಂದ್ರರ ದೃಷ್ಟಿ ಸಕಾರಾತ್ಮಕವಾದದ್ದು. ಆರೋಗ್ಯಪೂರ್ಣವಾದದ್ದು. ಬದುಕಿನಲ್ಲಿ ಎದುರಾಗುವ ಪರಿಸ್ಥಿತಿಯ ಸಕಲ ಸಾಧ್ಯತೆಗಳನ್ನೂ ಸಂಯಮದಿಂದ ಪರಾಮರ್ಶಿಸುವುದು, ಹೊಸ ಅರಿವಿನತ್ತ ಮುಖ ಮಾಡುವುದು ನೇಮಿಚಂದ್ರ ಕಥೆಗಳ ಬಹುಮುಖ್ಯಗುಣ. ಅವರ ಕಥಾ ನಾಯಕಿಯರು ಆಧುನಿಕ ತಿಳಿವಳಿಕೆ ಮತ್ತು ಪ್ರಬುದ್ಧ ಜೀವನದೃಷ್ಟಿಯುಳ್ಳ ಪಾತ್ರಗಳು. ಸಮಾಜ ಹೇರಿರಬಹುದಾದ ಸ್ತ್ರೀಬದ್ಧತೆ, ಬಂಧನಗಳಿಂದ ಬಿಡಿಸಿಕೊಂಡು ಹೊಸ ಬದುಕನ್ನು ಕಾಣಲು ಹಾತೊರೆಯುವ ಪಾತ್ರಗಳು. ಪುರುಷ ಪ್ರಧಾನ ಸಮಾಜದಲ್ಲಿನ ಗಂಡಸಿನ ದಬ್ಬಾಳಿಕೆ, ಮೇಲುಗೈತನಗಳ ಬಗ್ಗೆ ಬರವಣಿಗೆಯಲ್ಲಿ ಅಸಮಾಧಾನವಿದ್ದರೂ ಅದು ಆಕ್ರೋಶವಾಗುವುದಿಲ್ಲ. ಈ ನಿಟ್ಟಿನಲ್ಲಿ ಅವರ ಪ್ರಬುದ್ಧತೆಯ ಗುಣ ಮೆಚ್ಚುವಂಥದದ್ದು.

**ಗ್ರಂಥ ಋಣ**


1. ಸಂ.ಶಾಂತಾ ಇಮ್ರಾಪುರ, ನಿರ್ದಿಗಂತ, ಸಂಪುಟ–೨, ಸುಂದರ ಪ್ರಕಾಶನ, ಧಾರವಾಡ, ೨೦೦೯, ಪುಟ ೧೧೧
2. ನೇಮಿಚಂದ್ರ, ಇಲ್ಲಿಯವರೆಗಿನ ನೇಮಿಚಂದ್ರ ಕಥೆಗಳು, ಅಂಕಿತ ಪುಸ್ತಕ, ಬೆಂಗಳೂರು, ೨೦೦೧, ಪುಟ ೨೪೯
3. ನೇಮಿಚಂದ್ರ, ಇಲ್ಲಿಯವರೆಗಿನ ನೇಮಿಚಂದ್ರ ಕಥೆಗಳು, ಅಂಕಿತ ಪುಸ್ತಕ, ಬೆಂಗಳೂರು, ೨೦೦೧, ಪುಟ ೧೧೯
4. ಸಂ.ಡಾ.ಎಸ್.ಡಿ.ಶಶಿಕಲಾ, ಡಾ.ಕೆ.ಎಸ್.ರತ್ನಮ್ಮ, ಡಾ.ಮಂಜುಳಾ ಹುಲ್ಲಹಳ್ಳಿ, ವಿಜಯಾನ್ವೇಷಣ, ವಿಜಯಾದಬ್ಬೆ ಅಭಿನಂದನಾಗ್ರಂಥ ಸಮಿತಿ, ಸರಸ್ವತಿಪುರಂ, ಮೈಸೂರು, ೨೦೦೪, ೪೪೬
5. ನೇಮಿಚಂದ್ರ, ಇಲ್ಲಿಯವರೆಗಿನ ನೇಮಿಚಂದ್ರ ಕಥೆಗಳು, ಅಂಕಿತ ಪುಸ್ತಕ, ಬೆಂಗಳೂರು, ೨೦೦೧ (ಮುನ್ನುಡಿ, ನಿಮ್ಮೊಡನೆ)
6. ವಿವಿಧ ಲೇಖಕರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೩, ಪುಟ ೧೫೭.
7. ನೇಮಿಚಂದ್ರ, ಇಲ್ಲಿಯವರೆಗಿನ ನೇಮಿಚಂದ್ರ ಕಥೆಗಳು, ಅಂಕಿತ ಪುಸ್ತಕ, ಬೆಂಗಳೂರು, ೨೦೦೧, ಪುಟ ೨೦೪
8. ನೇಮಿಚಂದ್ರ, ಇಲ್ಲಿಯವರೆಗಿನ ನೇಮಿಚಂದ್ರ ಕಥೆಗಳು, ಅಂಕಿತ ಪುಸ್ತಕ, ಬೆಂಗಳೂರು, ೨೦೦೧, ಪುಟ ೪೦
9. ಸಂ.ಶಾಂತಾ ಇಮ್ರಾಪುರ, ನಿರ್ದಿಗಂತ, ಸಂಪುಟ–೨, ಸುಂದರ ಪ್ರಕಾಶನ, ಧಾರವಾಡ, ೨೦೦೯, ಪುಟ ೧೦೭
10. ಡಾ.ಗಾಯತ್ರಿ ನಾವಡ, ಮಹಿಳಾ ಸಂಕಥನ, ಕನ್ನಡ ಪುಸ್ತಕ ಪ್ರಾಧಿಕಾರ, ಚಾಮರಾಜಪೇಟೆ, ಬೆಂಗಳೂರು, ೨೦೦೩, ಪುಟ ೧೬೮
11. ನೇಮಿಚಂದ್ರ, ಇಲ್ಲಿಯವರೆಗಿನ ನೇಮಿಚಂದ್ರ ಕಥೆಗಳು, ಅಂಕಿತ ಪುಸ್ತಕ, ಬೆಂಗಳೂರು, ೨೦೦೧, ಪುಟ ೫೬